**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ11.11.2025 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಬಿ ಎಂ ಎನ್ ವಕೀಲರಿಂದಃ**

ಈ ದಾವೆಯು ಆಸ್ತಿ ವಿಚಾವಾಗಿ ನಡೆಯುತ್ತಿದೆ. ಜವರಯ್ಯನವರು ಸಿಂಗನಕುಂತೇಗೌಡರ ಮಗನಾದ ಸಿಂಗ್ರಿಗೌಡರಿಂದ ಯಾವ ದಿನಾಂಕದಂದು ಕ್ರಯಪತ್ರವನ್ನು ಬರೆಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಸದರಿ ಕ್ರಯ ಪತ್ರದ ವಿಚಾರಗಳನ್ನು ಓದಿ ತಿಳಿದುಕೊಂಡಿದ್ದೇನೆ. ಸದರಿ ಕ್ರಯಪತ್ರದ ಆಸ್ತಿಯ ಚಕ್ಕುಬಂದಿಯನ್ನು ನಾನು ತಿಳಿದುಕೊಂಡಿದ್ದೇನೆ. ಸದರಿ ಆಸ್ತಿಯ ಚಕ್ಕುಬಂದಿ ಕ್ರಯಪತ್ರದಂತೆ ಪೂರ್ವಕ್ಕೆಃ ತಿಮ್ಮಯ್ಯ, ಪಶ್ಚಿಮಕ್ಕೆಃನಾಲೆ, ಉತ್ತರಕ್ಕೆಃ ಮಾದೇಗೌಡರ ಖಾಲಿ ಸೈಟು ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ.

ನಾನು ಕಾಡುಕೊತ್ತನಹಳ್ಳಿ ಗ್ರಾಮದಲ್ಲಿ ಹುಟ್ಟಿ ಬೆಳೆದಿರುತ್ತೇನೆ. ವಾದಿಗಳ ಮನೆಯ ಪೂರ್ವಕ್ಕೆಃಚಿಕ್ಕೋನು ಅಂದರೆ 1 ನೇ ಪ್ರತಿವಾದಿಯ ಮನೆ ಇರುತ್ತದೆ ಎಂದರೆ ಸರಿ. ಪಶ್ಚಿಮಕ್ಕೆಃ ವಿ ಸಿ ನಾಲೆ ಮತ್ತು ಚಿಕ್ಕೋನು ಅವರ ಖಾಲಿ ಜಾಗ ಇರುತ್ತದೆ ಎಂದರೆ ಸಾಕ್ಷಿಯು ನಾಲೆ ಇದೆ ಆದರೆ ಚಿಕ್ಕೋನು ಅವರ ಖಾಲಿ ಜಾಗ ಇಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಉತ್ತರಕ್ಕೆಃ ಚಿಕ್ಕೋನು ಅವರ ಮನೆಯಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದರೆ ಸರಿ.

ವಾದಪತ್ರ ಅನುಸೂಚಿಯಲ್ಲಿ ನಮೂದಿಸಿರುವ ಚಕ್ಕುಬಂದಿ ನನಗೆ ಗೊತ್ತಿಲ್ಲ. ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

(ಸಚಿನ್ ಹೆಚ್.ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ .ಎಂ .ಎಫ್ .ಸಿ ., ತಿ .ನರಸೀಪುರ .